ಮತ್ತು ಪರಂಪರೆಯ ದೋಣಿಗಳಲ್ಲಿ ತಾ॥ ೧೬-೮-೧೯೮೬ರಂದು ಮತ್ತು ಯಾಂತ್ರಿಕ ದೋಣಿಗಳಲ್ಲಿ ತಾ॥ ೨೩-೮-೧೯೮೬ರಿಂದ ಮೀನು ಹಿಡಿಯಲು ತೀರ್ಮಾನಿಸಿದರು. ಆದರೆ ಯಾಂತ್ರಿಕ ದೋಣಿಗಳು ಮಲ್ಪೆ ಬಂದರಿನಿಂದ ಮೀನನ್ನು ಹಿಡಿಯಲು ತಾ॥ ೧೬-೮-೧೯೮೬ರಂದು ಹೋದುವು. ತಾ॥ ೧೬-೮-೧೯೮೬ರಂದು ೨೮೦ ಪರಂಪರೆ ದೋಣಿಗಳಂ ಸಮುದ್ರದ ಮಧ್ಯೆ ೬ ಜನ ಇರುವ ದೋಣಿಯ ಮೇಲೆ ಮುತ್ತಿಗೆ ಹಾಕಿದರು. ಇದು ತೀರದಿಂದ ೫ ಕಿ.ಮೀ. ದೂರ ಇರುತ್ತದೆ. ನಾಲ್ಕು ದೋಣಿಯಲ್ಲಿರುವ ಸಹ ನಿವಾಸಿಗಳು ನಾಡ ದೋಣಿಯಲ್ಲಿ ಒಳಗೆ ಹೋಗಿ ನಾಲ್ಕು ಜನರಿರುವ ದೋಣಿಗೆ ಬೆಂಕಿ ಹಚ್ಚಿ ಅದನ್ನು ಮುಂಳಂಗಿಸಿದರು ನಂತರ ಇಬ್ಬರು ಇರುವ ದೋಣಿಯನ್ನು ಸರಿಪಡಿಸಿ ಅದನ್ನು ದಡಕ್ಕೆ ತರಲು ಒತ್ತಾಯಿಸಿದರು. ಮುಳುಗಿರುವ ದೋಣಿಯಲ್ಲಿರುವ ಸಹ ನಿವಾಸಿಗಳು ನಾಡ ಹತ್ತಗಿನಿಂದ ಸಮುದ್ರ ತೀರಕ್ಕೆ ಸೇರಿರುತ್ತಾರೆ. ಮುಳುಗಿದ ದೋಣಿಯಲ್ಲಿದ್ದ ಸಹ ನಿವಾಸಿಗಳಿಗೆ ಗಾಯಗಳಾಗಿದ್ದು ಪ್ರಾಣಾಪಾಯವಿರುವುದಿಲ್ಲ. ಇದರಿಂದ ಅಂದಾಜು ೩೨ ಲಕ್ಷ ರೂ. ನಷ್ಟವಾಗಿರುತ್ತದೆ. ಈ ಸಂಬಂಧದಲ್ಲಿ ೬ ಪ್ರಕರಣಗಳನ್ನು ದಾಖಲು ಮಾಡಿರುತ್ತಾರೆ. ಮೊದಲು ಮಲ್ಪೆಯಿಂದ ನಂತರ ಮುಲ್ಕಿಗೆ ವರ್ಗಾಯಿಸಲಾಗಿದೆ. ಕಾರಣ ಇದು ಮುಲ್ಕಿ ಪ್ರಾಧಿಕಾರಕ್ಕೆ ಸೇರಿರುತ್ತದೆ ಮತ್ತು ಈ ಠಾಣೆಯ ಸಿ.ಆರ್. ನಂ.೫೫/೮೬ರಿಂದ ೧೦೨/೮೬ರ ವರೆಗೂ ನಮೂದಿಸಿ ಇದರಲ್ಲಿ ೫ ರಿಂದ ೫೦೦ರ ವರೆಗೆ ಇರುವ ತಪ್ಪಿತಸ್ಥರ ಹೆಸರುಗಳನ್ನು ನಮೂದಿಸಿದ್ದಾರೆ ಮುಲ್ಕಿ ಪೋಲೀಸರು ೫ ಜನರನ್ನು ಬಂಧಿಸಿ ಇದನ್ನು ಪ್ರಥಮ ವರ್ತಮಾನದ ವರದಿಯಲ್ಲಿ ನಮೂದಿಸಿದ್ದಾರೆ. ಅವರ ಹೆಸರು ಗಳು ಈ ಕೆಳಕಂಡಂತೆ ಇವೆ.

೧) ವಿಠಲ್ ಸಂವರ್ಣ ಇವರು ತಿಮ್ಮಪ್ಪ ಪುತ್ರನ್ (ಉಳ್ಳಾಲ್) ಇವರ ಮಗ;
೨) ಉಮೇಶ್ ಕಾರ್ಕಳ ಇವರು ತಿಮ್ಮಯ್ಯ ಬೆಂಗ್ರೆಕುಲ ಇವರ ಮಗ.
೩) ಯಾದವ್ ಕಾಂಚನ್ ಇವರು ವಾಸಪ್ಪ ಅವಿಯಾನ ಬೈಕಂಪಾಡಿ ಇವರ ಮಗ.
೪) ಮೋಹನ್ ಬೆಂಗ್ರೆ ಇವರು ಬಾಗು ಸಂವರ್ಣ ಬೆಂಗ್ರೆ ಇವರ ಮಗ.
೫) ಹರೀನ್‌ಚಂದ್ರ ಇವರು ನಾಗಪ್ಪ ಮೇದನ್ ಬೆಂಗ್ರೆ ಇವರ ಮಗ.

ಇವರುಗಳೆಲ್ಲರನ್ನೂ ತಾ॥ ೧೮-೮-೧೯೮೬ರಂದು ಬಂಧಿಸಿ ತಾ॥ ೩೦-೮-೧೯೮೬ರ ವರೆಗೆ ನ್ಯಾಯಾಂಗದ ಕಸ್ಟಡಿಗೆ ಕೊಟ್ಟಿರುತ್ತಾರೆ. ಆದರೆ ತಾ॥ ೨೦-೮-೧೯೮೬ ರಿಂದ ಜೆ.ಎಂ.ಎಸ್.ಸಿ. ನ್ಯಾಯಾಲಯ ಕಾರ್ಕಳ ಇವರು ೫ ಜನರನ್ನು ಪರತ್ತಿನ ಜಾಮೀನಿನ ಮೇಲೆ ಬಿಡುಗಡೆ ಮಾಡಿ ದಿನಕ್ಕೆ ೨ ಬಾರಿ ಪೋಲೀಸ್ ಠಾಣೆಗೆ ಹಾಜರಾಗಲು ಸೂಚಿಸಿದೆ. ತನಿಖೆಯು ಮುಂದುವರಿಯುತ್ತಿದೆ.

೧-೩೦ ಪಿ.ಎಂ.

೯. ಬೆಳಗಾಂ ನಗರ ಕಾರ್ಪೊರೇಷನ್ನಿನ ಕರ್ನಾಟಕ ರಾಜ್ಯ ವಿರೋಧಿ ನೀತಿಯನ್ನು ವಿರೋಧಿಸಿ ಕನ್ನಡ ಸಂಘ-ಸಂಸ್ಥೆಗಳಂ ಮುತ್ತಿಗೆ ಹಾಕುವ ಕಾರ್ಯಕ್ರಮದ ಬಗ್ಗೆ

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ ಇದೇ ೨೬-೬-೮೬ರಂದು ಬೆಳಗಾಂ ನಗರ ಕಾರ್ಪೊರೇಷನ್ ನಡೆಸಿರುವ ಅವ್ಯವಹಾರ, ರಾಜ್ಯ ವಿರೋಧಿ ನೀತಿಯನ್ನು ಪ್ರತಿ ಭಟಿಸಲು ಬೆಳಗಾಂ ನಗರದ ಕನ್ನಡ ಸಂಘ-ಸಂಸ್ಥೆಗಳು, ಕನ್ನಡ ಚಳುವಳಿಗಾರರು ನಗರ ಸಭೆಯನ್ನು ಮುತ್ತಿಗೆ ಹಾಕುವ ಕಾರ್ಯಕ್ರಮವೊಂದನ್ನು ಘೋಷಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಗಣೇಶನ ಹಬ್ಬ ಸನ್ನಿಹಿತವಾಗಿರುವ ಈ ಸನ್ನಿವೇಶದಲ್ಲಿ ಈ ಕ್ರಮ ಕಾರ್ಯಗತವಾದಲ್ಲಿ ನಗರದ ಶಾಂತಿ ವ್ಯವಸ್ಥೆಗೆ ಧಕ್ಕೆ ಬರುವ ಸಂಭಂದವಿದೆಯೆಂಬುದು ಸರ್ಕಾರಕ್ಕೆ ತಿಳಿದಿದೆಯೇ ? ಈ ಬಗ್ಗೆ ಸರ್ಕಾರ ಯಾವ ಕಾರ್ಯಕ್ರಮ ಕೈಕೊಂಡಿದೆ ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಮಾನ್ಯ ಅಧ್ಯಕ್ಷರೇ ಇದಕ್ಕೆ ಸಂಬಂಧಪಟ್ಟ ಹಾಗೆ ಲಾ ಆಂಡ್ ಆರ್ಡರ್ ಬಗ್ಗೆ ಹಿಂದೆ ಹೇಳಿಕೆಯನ್ನು ಕೊಟ್ಟಿದ್ದೇನೆ. ಬೆಳಗಾಮ್ ಪರಿಸ್ಥಿತಿ ಈಗ ಚೆನ್ನಾಗಿ ಇದೆ. ಮತ್ತೆ ಮಾನ್ಯ ಸದಸ್ಯರುಗಳಂತವರು ಹೇಳಿರತಕ್ಕಂಥ ವಿಚಾರದ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಆದೇಶ ಕೊಟ್ಟ ಏರ್ಪಾಡು ಮಾಡಿದ್ದೇನೆ.

೧೦. ಪದವಿ ಪೂರ್ವ ಶಿಕ್ಷಣ ಮಂಡಳಿಯನ್ನು ಒಂದು ಸ್ವಾಯತ್ತ ಮಂಡಳಿಯನ್ನಾಗಿ ಮಾಡುವ ಬಗ್ಗೆ

ಶ್ರೀ ಬಿ. ಸ್ವಾಮಿರಾವ್ — ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಪದವಿಪೂರ್ವ ಕಾಲೇಜುಗಳು ಅಸ್ತಿತ್ವಕ್ಕೆ ಬಂದು ಸುಮಾರು ೧೪ ವರ್ಷಗಳೇ ಸಂದಿದ್ದರೂ ಇನ್ನೂ ಅವುಗಳ ವ್ಯವಸ್ಥೆ ಶೋಚನೀಯ ಸ್ಥಿತಿಯಲ್ಲಿರುವುದು ವಿದ್ಯಾರ್ಥಿಗಳು, ಅಧ್ಯಾಪಕರು, ವಿವಿಧ ಇಲಾಖೆಗಳಲ್ಲಿ ಹಂಚಿ ಹೋಗಿರುವುದು. ಇಂದಿನವರೆಗೂ ಪದವಿ ಪೂರ್ವ ಶಿಕ್ಷಣ ಮಂಡಳಿಯನ್ನು ಒಂದು ಸ್ವಾಯತ್ತ ಮಂಡಳಿಯನ್ನಾಗಿ ಮಾಡದೆ ವಿಳಂಬ ಮಾಡುತ್ತಿರುವುದು.

ಉಪನ್ಯಾಸಕರುಗಳಿಗೆ ಪದವಿ ಪೂರ್ವ ಕಾಲೇಜುಗಳಿಗೂ ಅನ್ವಯವಾಗುವಂತೆ ರೀಡರ್, ಪ್ರೊಫೆಸರ್ ಹುದ್ದೆಗಳನ್ನು ಸೃಷ್ಟಿಸಬೆ ತಾರತಮ್ಯ ಮಾಡಿರುವುದು ಭೋಧಕೇತರ ಸಿಬ್ಬಂದಿಯವರಿಗೂ ಪದವಿ ಕಾಲೇಜುಗಳಲ್ಲಿ ಇರುವಂತೆ ಬಡ್ತಿಯ ಅವಕಾಶ ಮಾಡಿ ಕೊಡದಿರುವುದು ಗ್ರಂಥಾಧಿಕಾರಿ, ದೈಹಿಕ ಶಿಕ್ಷಕರ ಹುದ್ದೆಗಳನ್ನು ಪದವಿ ಕಾಲೇಜುಗಳಲ್ಲಿ ಇರುವಂತೆ ಸೃಷ್ಟಿಸಿ ಭರ್ತಿ ಮಾಡದಿರುವುದು. ಮಂಂತಾದ ವಿಚಾರಗಳನ್ನು ಕುರಿತಂ ಪದವಿ ಪೂರ್ವ ಕಾಲೇಜಿನ ಭೋದಕರು ಮತ್ತು ಭೇಧಕೇತರ ಸಾವಿರಾರು ಸಿಬ್ಬಂಧಿಯವರು ಈ ದಿನ ಸಾವಿರಾರು ಜನರು ''ವಿಧಾನ ಸೌಧ ಚಲೋ'' ಜಾತಾ ಹೊರಡಿಸಿರುವುದರಿಂದ ಈ ವಿಷಯದಲ್ಲಿ ಸದನದ ಗಮನ ಸೆಳೆಯುತ್ತಾ ಸ್ಪಷ್ಟವಾದ ಉತ್ತರವನ್ನು ಸಂಬಂಧ ಪಟ್ಟ ಮಂತ್ರಿಗಳಪರಿಂದ ಬಯಸುತ್ತೇನೆ.

ಶ್ರೀ ಡಿ. ಮಂಜುನಾಥ್ (ವಿದ್ಯಾ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಮೊದಲು ಪಿ.ಯು.ಸಿ. ಬೋರ್ಡ್‌ನ್ನು ಆಟಾನಮಿ ಬೋರ್ಡನ್ನಾಗಿ ಮಾಡಬೇಕು. ಎಕ್ಸಿಕ್ಯುಟೀವ್ ಆರ್ಡರ್ ಮೇಲೆ ಪ್ರತ್ಯೇಕವಾಗಿ ಸ್ವಾಯತ್ತತೆಯಾಗಬೇಕಾಗಿದೆ. ಜೂನಿಯರ್ ಕಾಲೇಜುಗಳಲ್ಲಿ ಪ್ರೊಫೆಸರ್ಸ್ ಎಂದು ಏನು ಇದ್ದಾರೆ ಆ ಹುದ್ದೆಗಳನ್ನೂ ಕೂಡ ಕೊಡಬೇಕೆಂದು ಶಿಕ್ಷಕರ ಸಂಘದವರಂ ಬಂದು ಚರ್ಚೆ ಮಾಡಿದ್ದಾರೆ. ಈಗ ಪಿ.ಯು.ಸಿ ಬೋರ್ಡ್ ಸರ್ಕಾರದ ಆಜ್ಞೆಯ ಮೇಲೆ ನಡೆಯಂತ್ತಿದೆ. ಇದಕ್ಕೆ ಸ್ವಾಯತ್ತತೆ ಕೊಡಬೇಕಾದರೆ ಕಾಯಿದೆ ಮಾಡಬೇಕಾಗಿದೆ. ಪಕ್ಕದ ರಾಜ್ಯಗಳಲ್ಲಿನ ಪರಿಸ್ಥಿತಿ ಹೇಗೆ ಇದೆ ಎಂಬುದೆಲ್ಲವನ್ನು ಅಧ್ಯಾಯನಮಾಡಿ ಮಂಂದಿನ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ. ಮಂತ್ತೆ ಜೂನಿಯರ್ ಕಾಲೇಜುಗಳಲ್ಲಿ ಪ್ರೊಫೇಸರುಗಳ ಹುದ್ದೆಗಳನ್ನು ಕೂಡ ಕೇಳುತ್ತಿದ್ದಾರೆ. ಇದು ಬೇಕೆ ಬೇಡವೆ ಎನ್ನುವ ಪ್ರಶ್ನೆಯನ್ನು ನೋಡಬೇಕಾಗಿದೆ. ಲೆಕ್ಚರರ್ಸ್ ರೀಡರ್ಸ್ ಬಗ್ಗೆಯೂ ಕೂಡ ಚರ್ಚೆ ಮಾಡಿದ್ದೇವೆ. ಸಾವಧಾನವಾಗಿ ಇದನ್ನೆಲ್ಲವನ್ನು ಕೇಳಿ ಕನ್‌ವಿನ್ಸ್ ಮಾಡಬೇಕಾಗಿದೆ. ವಿಧಾನ ಸೌಧ ಚಲೋ ಮಾಡತಕ್ಕಂಥದ್ದು ಕಾಮನ್ ಆಗಿಬಿಟ್ಟಿದೆ. ಮೊನ್ನೆ ಹತ್ತುಸಾವಿರಜನರು ಬಂದಿದ್ದರು. ಇವರೂ ಬರುತ್ತಿದ್ದಾರೆ, ಒಂದರೆ ಅವರಿಗೆ ಸೂಕ್ತ ಉತ್ತರವನ್ನು ಹೇಳಿ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು.— ಮಾನ್ಯ ಬಂಗಾರಪ್ಪನವರೇ ತಾವು ಕರ್ನಾಟಕ ಸಹಕಾರಿ ಬಟ್ಟೆ ಗಿರಣಿ ಬಗ್ಗೆ ಮಾತನಾಡಿ.

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ ನಾನು ನಿಯಮ ೩೫೪ರ ಕೆಳಗೆ ನೋಟೀಸ್ ಕಳುಹಿಸಿಕೊಟ್ಟಿದ್ದೆ, ಆದರ ಬಗ್ಗೆ ಮಾನ್ಯ ಸಚಿವರಿಂದ ಉತ್ತರಬಂದಿಲ್ಲ,

ಅಧ್ಯಕ್ಷರು.—ನೀವು ಕೇಳಿರತಕ್ಕಂಥ ವಿಷಯ ಮತ್ತು ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ ರವರು ಕೇಳಿರತಕ್ಕಂಥ ವಿಷಯ ಎರಡೂ ಒಂದೇ ಆಗಿರುತ್ತದೆ.

ಶ್ರೀ ಜಿ. ನಾರಾಯಣ ಕುಮಾರ್.—ಅವರು ಕೇಳಿರತಕ್ಕಂಥ ವಿಷಯವೇ ಬೇರೆ ನಾನಂ ಕೇಳಿರುವ ವಿಷಯವೇ ಬೇರೆಯಾಗಿರುತ್ತದೆ. ತಾವು ಬೇಕಾದರೆ ಓದಿ ನೋಡಿ.